ಉಡುಪಿ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆ ಪ್ರತಿಗ್ರಾಮದಲ್ಲಿ ವಿತರಣೆ

323 (630) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉಡುಪಿ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆ ವಿತರಣೆ ಆಗದೇ ಇರತಕ್ಕಂತ ಗ್ರಾಮಗಳುಯಾವುವು?

ಆ) ಪಡಿತರ ವ್ಯವಸ್ಥೆ ಪ್ರತಿ ಗ್ರಾಮದಲ್ಲಿ ವಿತರಣೆ ಆಗದಿರುವುದರಿಂದ ಫಲಾನುಭವಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಉಡುಪಿ ಜಿಲ್ಲೆಯಲ್ಲಿ ಎಲ್ಲಾ ಗ್ರಾಮಗಳಿಗೂ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಸೇರಿಸಲಾಗಿದೆ. ಆದಾಗ್ಯೂ ಉಡುಪಿ ಜಿಲ್ಲೆಯಲ್ಲಿ 19 ಗ್ರಾಮಗಳ ನ್ಯಾಯ ಬೆಲೆ ಅಂಗಡಿಗಳ ಸೌಲಭ್ಯವನ್ನು ಹೊಂದಿರುವುದಿಲ್ಲ

1. ಕುಂದಾಪುರ ತಾಲ್ಲೂಕಿನಲ್ಲಿ 16 ಗ್ರಾಮಗಳು

1) ಕನ್ಯಾನ	2) ಕಟ್ಬಬೆಟ್ಟೂರ್	3) ಹರ್ಕೂರ್	4) ಮಜಡಿ
5) ದಲ್ಲಾಡು	6) ಹೇರಂಬಾಳು	7) ಎಡಮೊಗೆ	8) ಅಜ್ರಿ
9) ಕುಳಂಜಿ	10) ವಕ್ವಾಡಿ	11) ಆಸೋಡು	12) ಹಾಳಾಡಿ
13) ಮಾಡಮಕ್ಕಿ	14) ಹೊಂಬಾಡಿ:ಹಂಡಾಡಿ	15) ಗೋಪಡಿ	16) ಪೆಸ್ಕೇತೂರ್

2. ಉಡುಪಿ ತಾಲ್ಲೂಕಿನಲ್ಲಿ 3 ಗ್ರಾಮಗಳು

1) ಶಿರೂರು	2) ಮತ್ಪಾಡಿ	3) ಗುಂಡ್ಮಿ

ಆ) ಇಲ್ಲ

ಕುಂದಾಪುರ ತಾಲ್ಲೂಕಿನಲ್ಲಿ ಕಾಲೇಜುನಲ್ಲಿ ವಿದ್ಯಾರ್ಥಿ ಹಾಗೂ ಸಾರ್ವಜನಿಕರಿಗೆ ಓಡಾಡುವ ರಸ್ತೆಗಳಲ್ಲಿ ವಿದ್ಯುತ್ ಸಂಪರ್ಕ

324 (634) ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಹೊಸಂಗಡಿ, ಕುಂದಪುರ ತಾಲ್ಲೂಕು ಇವರು ಜೂನಿಯರ್ ಕಾಲೇಜು, ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಶಾಲೆಗಳನ್ನು ಒಳಪಡಿಸಿ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ದಾರಿಗಳಿಗೆ ಗೇಟುಗಳಲ್ಲಿ ಪರವಾನಿಗೆ ಕೇಳುತ್ತಿರುವುದು ನಿಜವೇ; ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗ್ರಾಮ ಪಂಚಾಯಿತಿ, ತಾ.ಪ. ಮತ್ತು ಜಿಲ್ಲಾ ಪಂಚಾಯಿತಿ, ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ಆಗುವ ತೊಂದರೆಯನ್ನು ಸರಿಪಡಿಸಲು ನಿರ್ಣಯವನ್ನು ಕೈಗೊಂಡು ನಿಗಮಕ್ಕೆ ಸೂಚಿಸಿದರೂ ಸರಿಪಡಿಸದಿರಲು ಕಾರಣವೇನು;